**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 69/2018**

ಚಾ.ಸಾ-02, ಪ್ರಾ.ಸಾ-06

| | | |
|---|---|---|
| ಹೆಸರು | : | ಪುಟ್ಟಮಾದಯ್ಯ |
| ತಂದೆಯ ಹೆಸರು | : | ಲೇಟ್ ಮಾದಯ್ಯ |
| ವಯಸ್ಸು | : | 70 |
| ವೃತ್ತಿ | : | ಕೂಲಿಕೆಲಸ |
| ವಾಸ | : | ಕಾರ್ಗಳ್ಳಿ ಗ್ರಾಮ, ತಿ. ನರಸೀಪುರ ತಾಲ್ಲೂಕು. |

**ದಿನಾಂಕ 29.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಪ್ರಾಸಾ-1 ನನ್ನ ಹೆಂಡತಿ. ಆರೋಪಿತರ ಪರಿಚಯವಿದೆ. ಈ ದಿನ ನ್ಯಾಯಾಲಯದಲ್ಲಿರುವ 3ನೇ ಆರೋಪಿತನನ್ನು ನೋಡಿ ಗುರುತಿಸಿರುತ್ತೇನೆ. 1 ಮತ್ತು 2ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಅವರು ಗೈರುಹಾಜರಾಗಿದ್ದು, ಅವರ ಗುರುತಿಸುವಿಕೆಯ ಬಗ್ಗೆ ಅವರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

ಕಳೆದ ಆರು ವರ್ಷಗಳ ಹಿಂದೆ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ನಮ್ಮ ಜಮೀನಿನಲ್ಲಿ ಆರೋಪಿತರು ನನ್ನ ಹೆಂಡತಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿರುತ್ತಾರೆ. ನಾನು ಗಲಾಟೆಯನ್ನು ಬಿಡಿಸಲು ಹೋದಾಗ ಆರೋಪಿತರು ಅಲ್ಲಿಂದ ಹೊಗಿರುತ್ತಾರೆ. ನನ್ನ ಹೆಂಡತಿಯ ಎಡ ಕಪಾಲಕ್ಕೆ, ಎಡಭುಜಕ್ಕೆ ಮತ್ತು ತಲೆಗೆ ಆರೋಪಿತರು ಹೊಡೆದಿರುತ್ತಾರೆ. ನೀರಿನ ವಿಚಾರಕ್ಕೆ ಆರೋಪಿತರು ಗಲಾಟೆ ಮಾಡಿರುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಭಾಗಶ: ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶ: ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

1ನೇ ಆರೋಪಿತ ದೊಣ್ಣೆಯಿಮದ ನನ್ನ ಹೆಂಡತಿಯ ಎಡಭುಜಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ. 2 ಮತ್ತು 3ನೇ ಆರೋಪಿತರು ನನ್ನ ಹೆಂಡತಿಯ ತಲೆ ಕೂದಲನ್ನು ಹಿಡಿದು ಎಳೆದಾಡಿ, ತಮ್ಮ ಕೈಗಳಿಂದ ಆಕೆಯ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ನನ್ನ ಹೆಂಡತಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಗಲಾಟೆಯ ವಿಷಯವನ್ನು ಚಾಸಾ-3 ಮತ್ತು ಫ್ರಾಸಾ-3 ರವರು ನನಗೆ ತಿಳಿಸಿದರು ಎಂದರೆ ಸರಿ.

ಸದರಿ ದೊಣ್ಣೆಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ಎಂಒ.1 ಎಂದು ಗುರುತಿಸಲ್ಪಟ್ಟಿದೆ.

**ಪಾಟೀ ಸವಾಲುಃ ಶ್ರೀ ಎನ್.ಎಸ್. ವಕೀಲರಿಂದ ಆರೋಪಿತರ ಪರ :**

ನಾನು ಘಟನೆಯ ದಿನ ಮೇಕೆಗಳನ್ನು ಮೇಯಿಸಲು ಹೋಗಿದ್ದೆ. ಅಲ್ಲಿಂದ ಘಟನಾ ಸ್ಥಳಕ್ಕೆ ಸುಮಾರು ಅರ್ಧ ಫರ್ಲಾಂಗ್ ಅಂತರವಿತ್ತು. ನನಗೆ ಬಲಗಣ್ಣು ಸರಿಯಾಗಿ ಕಾಣುವುದಿಲ್ಲ. ನನ್ನ ಇನ್ನೊಂದು ಕಣ್ಣು ಸ್ವಲ್ಪ ಸ್ವಲ್ಪ ಕಾಣುತ್ತದೆ. ಹಾಗಾಗಿ, ದೂರದಿಂದ ದೃಷ್ಠಿ ಸರಿಯಾಗಿ ಕಾಣುವುದಿಲ್ಲ ಎಂದರೆ ಸರಿ.

ನನ್ನ ಹೆಂಡತಿಗೆ ಹಲ್ಲೆ ಮಾಡಲಾಗಿದೆ ಎಂದು ನಮ್ಮ ಊರಿನವರು ನನಗೆ ತಿಳಿಸಿದರು. ಆರೋಪಿತರ ಕೃತ್ಯವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ. ನಾನು ಘಟನೆಯನ್ನು ನೋಡಿಲ್ಲದೆ ಇದ್ದರೂ ಕೂಡ ಪ್ರಾಸಾ-1 ರವರ ಮಾತಿನ ಮೇರೆಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಅಳಿಯಂದಿರು ನನ್ನ ಹೆಂಡತಿಯನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಅವರು ಮಾದಾಪುರ ಗ್ರಾಮದವರು ಮತ್ತು ಮೈಸೂರಿನವರು. ಅವರು ನಮ್ಮ ಊರಿಗೆ ಘಟನೆಯ ದಿನ ಮಧ್ಯಾಹ್ನ 1.00 ಗಂಟೆಗೆ ಬಂದಿದ್ದರು. ಅವರಿಗೆ ಘಟನೆಯ ವಿಷಯವನ್ನು ತಿಳಿಸಿ ಅವರನ್ನು ಊರಿಗೆ ಕರೆಸಿಕೊಳ್ಳಲಾಯಿತು.

ನನ್ನ ಹೆಂಡತಿಯನ್ನು ಮಧ್ಯಾಹ್ನ 3.00 ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನಾನು ಅಲ್ಲಿಗೆ ಹೋಗಿರಲಿಲ್ಲ. ಆಕೆ ಅಲ್ಲಿ 12 ದಿನಗಳವರೆಗೆ ಇದ್ದಳು.

ಎಂಒ.1 ಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಬೋರ್‌ವೆಲ್ ನೀರಿನ ವಿಚಾರದಲ್ಲಿ ನಾವೂ ಮತ್ತು ಆರೋಪಿತರು ಮೊದಲಿನಿಂದಲೂ ಮಾತನಾಡುತ್ತಿರಲಿಲ್ಲ ಎಂದರೆ ಸರಿ. ಸದರಿ ಬೋರ್‌ವೆಲ್‌ನ್ನು ಆರೋಪಿತರು ಬೇರೆಯವರ ಪರವಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ಆರೋಪಿತರ ಜೊತೆ ನನ್ನ ಹೆಂಡತಿ ಸದರಿ ಬೋರ್‌ವೆಲ್ ಸಂಬಂಧ ಗಲಾಟೆ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದೂರು ನೀಡಿರುತ್ತಾಳೆ ಎಂದರೆ ಸರಿಯಲ್ಲ. ನಾನು ಗಲಾಟೆಯನ್ನು ನೋಡಿಲ್ಲದೆ ಇದ್ದರೂ ಕೂಡ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**